I/628701/2024

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ/22/ಸಿಡಿಸಿ(1)/2023(1162627)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:26-06-2024.

**ಸುತ್ತೋಲೆ**

ವಿಷಯ: ಪಾಲಿಟೆಕ್ನಿಕ್ ಸಂಸ್ಥೆಯಲ್ಲಿನ ಉಪನ್ಯಾಸಕರಿಗೆ ಥಿಯರಿ, ಇಂಟಿಗ್ರೇಟಡ್ / Pathway ಹಾಗೂ ಪ್ರಾಯೋಗಿಕ ತರಗತಿಗಳ ಬೋಧನಾಪಠ್ಯ ವಿಷಯಗಳನ್ನು **ಹಂಚಿಕೆ ಮಾಡುವುಬಗ್ಗೆ.**

****

ಮೇಲ್ಕಂಡ ವಿಷಯದ ಬಗ್ಗೆ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿನ ಎಲ್ಲಾ ಕೋರ್ಸುಗಳಿಗೆ ಸಂಬಂಧಿಸಿದಂತೆ, ಡಿಪ್ಲೊಮಾ ಥಿಯರಿ ಪಠ್ಯ ವಿಷಯಗಳು ಮತ್ತು ಐದನೇ ಸೆಮಿಸ್ಟರ್ Pathway ಪಠ್ಯ ವಿಷಯಗಳ ಬೋಧನಾ ಕಾರ್ಯಗಳನ್ನು ಮೊದಲಿಗೆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಉಪನ್ಯಾಸಕರುಗಳಿಗೆ ಕಡ್ಡಾಯವಾಗಿ ಹಂಚಿಕೆ ಮಾಡಿದ ನಂತರ, ಉಳಿದಿರುವ ಪಠ್ಯವಿಷಯಗಳನ್ನು ಖಾಯಂ ಉಪನ್ಯಾಸಕರ ಕೊರತೆಯಿಂದಾಗಿ ಸಂಸ್ಥೆಯಲ್ಲಿ ನೇಮಿಸಿರುವ ಅತಿಥಿ ಉಪನ್ಯಾಸಕರುಗಳಿಗೆ ಹಂಚಿಕೆ ಮಾಡಲು ಸಂಸ್ಥೆಗಳ ವಿಭಾಗಾಧಿಕಾರಿಗಳು/ಪ್ರಾಚಾರ್ಯರುಗಳು ಅಗತ್ಯ ಕ್ರಮ ವಹಿಸುವುದು. ಮುಂದುವರೆದು ಈಗಾಗಲೇ ತಿಳಿಸಿದಂತೆ ಎಲ್ಲಾ ಇಂಟಿಗ್ರೇಟಡ್/Pathway/ಪ್ರಾಯೋಗಿಕ ತರಬೇತಿಗಳ ಪ್ರತಿ ಬ್ಯಾಚ್‌ಗಳನ್ನು ಮೂವತ್ತು (30) ವಿದ್ಯಾರ್ಥಿಗಳಿಗೆ ಸೀಮಿತಗೊಳಿಸಿ ತರಬೇತಿಯನ್ನು ನೀಡಲು ಕ್ರಮ ವಹಿಸುವಂತೆ ಮತ್ತು ಈ ನಿಟ್ಟಿನಲ್ಲಿ ತೆಗೆದುಕೊಂಡಿರುವ ಕ್ರಮದ ಬಗ್ಗೆ ಮಾಹಿತಿಯನ್ನು ಜಂಟಿ ನಿರ್ದೇಶಕರು(ಸಿಡಿಸಿ) ಇವರ ಇ-ಮೇಲ್‌ಗೆ (jointdirector.cdc@gmail.com) ತಪ್ಪದೆ ಕಳುಹಿಸಲು ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:

ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ- ಸೂಕ್ತ ಕ್ರಮಕ್ಕಾಗಿ.

ಪ್ರತಿ: ಜಂಟಿ ನಿರ್ದೇಶಕರು-ಪರೀಕ್ಷೆ-ತಾಂ.ಪ.ಮ, ಬೆಂಗಳೂರು- ಮಾಹಿತಿಗಾಗಿ.